# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352-229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್-104/2017-18/3608 ದಿನಾಂಕ:24-03-2018

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ:- 15-03-2018 ರಂದು ಮಧ್ಯಾಹ್ನ 2:30 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ:- 15-03-2018 ರಂದು ಮಧ್ಯಾಹ್ನ 2:30 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ**
**ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಪ್ರತಿಗಳು:-**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ. | ಸದಸ್ಯರು | 18-11-2017 | 17-11-2018 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಡಾ.ಅಶೋಕ ಇಟಗಿ | ಸದಸ್ಯರು | 07-12-2017 | 06-12-2018 |
| 8. | 1(ಎಫ್) | ಶ್ರೀ ಬಸವರಾಜ ಬಾದರ್ಲಿ | ಸದಸ್ಯರು | 07-12-2017 | 06-12-2018 |
| 9. | 1(ಎಫ್) | ಡಾ. ಇಸ್ತಾಕಅಹ್ಮದ ಹವಾಲ್ದಾರ್ | ಸದಸ್ಯರು | 07-12-2017 | 06-12-2018 |
| 10. | 1(ಎಫ್) | ಡಾ.ನೀಲಾಂಬಿಕಾ ಎಸ್ ಪಟ್ಟಣಶೆಟ್ಟಿ | ಸದಸ್ಯರು | 07-12-2017 | 06-12-2018 |
| 11. | 1(ಹೆಚ್) | ಪ್ರೊ.ಎಸ್.ಬಿ.ಕಾಮಶೆಟ್ಟಿ | ಸದಸ್ಯರು | 5-9-2017 | 4-9-2018 |
| 12. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 13. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 14. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 15. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 16. | ಪ್ರಕರಣ 18(2) | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) | ಸದಸ್ಯರು | 4-10-2017 | |
| 17. | ಪ್ರಕರಣ 17(2) | ಪ್ರೊ. ಎಲ್.ಆರ್.ನಾಯಕ, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 4-10-2017 | |

## ದಿನಾಂಕ:15–03–2018 ರಂದು ಮಧ್ಯಾಹ್ನ 2:30ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 3. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 4. | ಡಾ.ಅಶೋಕ ಇಟಗಿ | : ಸದಸ್ಯರು |
| 5. | ಡಾ.ಇಸ್ತಾಕ ಅಹ್ಮದ ಹವಾಲ್ದಾರ್ | : ಸದಸ್ಯರು |
| 6. | ಡಾ.ನೀಲಾಂಬಿಕಾ.ಎಸ್.ಪಟ್ಟಣಶೆಟ್ಟಿ | : ಸದಸ್ಯರು |
| 7. | ಪ್ರೊ.ಎಸ್.ಬಿ.ಕಾಮಶೆಟ್ಟಿ | : ಸದಸ್ಯರು |
| 8. | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 9. | ಪ್ರೊ.ಎಲ್.ಆರ್.ನಾಯಕ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ಶ್ರೀ.ಡಿ.ಎಂ.ನಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 2. | ಪ್ರೊ. ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ | : ಸದಸ್ಯರು |
| 3. | ಶ್ರೀ.ಬಸವರಾಜ ಬಾದರ್ಲಿ | : ಸದಸ್ಯರು |
| 4. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 7. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 8. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ನಿವೃತ್ತರಾದ ಸರ್ಕಾರದ ನಾಮನಿರ್ದೇಶಿತ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಮುಂದುವರೆದು ಮಾನ್ಯ ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

**ದಿನಾಂಕ: 15-03-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

ದಿನಾಂಕ: 21-01-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:-**

**ದಿನಾಂಕ:21-01-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

ದಿನಾಂಕ: 27-11-2018 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳನ್ನು ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:-**

**ದಿನಾಂಕ:27-11-2018 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

ದಿನಾಂಕ: 09-01-2018 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:-**

**ದಿನಾಂಕ: 09-01-2018 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

ದಿನಾಂಕ: 15-03-2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:-**

**ದಿನಾಂಕ:15-03-2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 01*

**ವಿಷಯ: ದಿನಾಂಕ:01-02-2018, 14-02-2018 ಮತ್ತು 20-02-2018ರಂದು ಜರುಗಿದ ಡೀನರ ಸಮಿತಿ ಸಭೆಯ ನಡವಳಿಗಳ ಅನುಮೋದನೆ ಕುರಿತು.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:01-02-2018, 14-02-2018 ಮತ್ತು 20-02-2018 ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಖಾಲಿ ಉಳಿದಿರುವ ಬೋಧಕ ಹುದ್ದೆಗಳ ನೇಮಕಾತಿ ಹಾಗೂ ಮಾರ್ಗಸೂಚಿಗಳ ಕುರಿತು ಡೀನರ ಸಮಿತಿಯ ಸಭೆಗಳನ್ನು ಜರುಗಿಸಿದ್ದು, ಸದರಿ ಸಭೆಗಳ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ದಿನಾಂಕ:01-02-2018, 14-02-2018 ಮತ್ತು 20-02-2018ರಂದು ಜರುಗಿದ ಡೀನರ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ: 02

**ವಿಷಯ: ಡಾ.ಹೇಮಲತಾ ಹೆಚ್.ಎಮ್., ಮಹಿಳಾ ಅಧ್ಯಯನ ವಿಭಾಗ, ಮಂಡ್ಯ ಹೊರಾವರಣ ಕೇಂದ್ರ, ಅಮವಿವಿ, ಮಂಡ್ಯ ಇವರು ಸಮಾವೇಶದಲ್ಲಿ ಪೇಪರ್ ಮಂಡಿಸಲು ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಡಾ.ಹೇಮಲತಾ ಹೆಚ್.ಎಮ್., ಮಹಿಳಾ ಅಧ್ಯಯನ ವಿಭಾಗ, ಮಂಡ್ಯ ಹೊರಾವರಣ ಕೇಂದ್ರ, ಅಮವಿವಿ, ಮಂಡ್ಯ ಇವರು ದಿನಾಂಕ:23-02-2018 ರಿಂದ 26-02-2018ರವರೆಗೆ ದುಬೈದಲ್ಲಿ ಜರುಗಲಿರುವ "Future of Education in Asia-Possibilities and Challenges in Dubai"ಸಮಾವೇಶದಲ್ಲಿ "Practical and Strategic Needs for Evolving Ethics and Values in Professionalism" ಪೇಪರ್ ಮಂಡಿಸಲಿದ್ದು, ಈ ಸಮಾವೇಶಕ್ಕೆ ಹೋಗಿಬರಲು ಅನುಮತಿ ಹಾಗೂ ಆರ್ಥಿಕ ನೆರವು(ಪ್ರಯಾಣ ಭತ್ಯೆ/ದಿನಭತ್ಯೆ) ಕೋರಿರುತ್ತಾರೆ.

ಆದ್ದರಿಂದ ಸದರಿಯವರಿಗೆ ಅನುಮತಿ ಮತ್ತು 50% ಆರ್ಥಿಕ ನೆರವು ಒದಗಿಸಲು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಘಟನೋತ್ತರ ಮಂಜೂರಾತಿಗಾಗಿ ಮಂಡಿಸಿದೆ.

*ನಿರ್ಣಯ:- ಘಟನೋತ್ತರ ಅನುಮೋದನೆ ನೀಡಲಾಯಿತು.*

## ಸಿಂಡಿಕೇಟ್ ಐಟಂ ಸಂಖ್ಯೆ : 03

**ವಿಷಯ: ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪುಸ್ತಕೋದ್ಯಮಕ್ಕೆ ಸಂಬಂಧಿಸಿದಂತೆ ಡಿಪ್ಲೋಮಾ ಕೋರ್ಸ್ ಅಥವಾ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ಬಗ್ಗೆ.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಪುಪ್ರಾ/47/ವಿ.ವಿ.ಡಿ.ಕೋ/2017-18, ದಿನಾಂಕ:19-02-2018ರನ್ವಯ ಕನ್ನಡ ಪುಸ್ತಕ ಪ್ರಾಧಿಕಾರವು ಜನಸಾಮಾನ್ಯರಲ್ಲಿ-ಪುಸ್ತಕೋದ್ಯಮ ಜನಪ್ರಿಯಗೊಳಿಸಲು ಹಲವಾರು ಯೋಜನೆಗಳನ್ನು ರೂಪಿಸಿ ಆರಂಭದಿಂದ ಈವರೆಗೆ ಅನುಷ್ಠಾನಕ್ಕೆ ತರುತ್ತಾ ಬರುತ್ತಿದೆ. ಜನಸಾಮಾನ್ಯರಲ್ಲಿ ಪ್ರಚಲಿತವಲ್ಲದ, ಆದರೆ ಅತ್ಯಂತ ಮುಖ್ಯವಾದ ಪುಸ್ತಕೋದ್ಯಮದ ಬಗ್ಗೆ ಅರಿವು ಮೂಡಿಸುವ ಯೋಜನೆಯನ್ನು ಅಧಿಕೃತಗೊಳಿಸುವ, ಜನಸಾಮಾನ್ಯರಲ್ಲಿ ಪುಸ್ತಕೋದ್ಯಮದ ಬಗ್ಗೆ ಅರಿವು-ಆಸಕ್ತಿ ಮೂಡಿಸುವ ಕೆಲಸವಾಗಬೇಕಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಡಿಪ್ಲೋಮಾ ಕೋರ್ಸ್ ಅಥವಾ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲು ವಿನಂತಿಸಿದೆ.ಈ ಯೋಜನೆಯ ಅನುಷ್ಠಾನಕ್ಕೆ ಪುಸ್ತಕ ಪ್ರಾಧಿಕಾರವು ತನ್ನ ಕಾರ್ಯ ವ್ಯಾಪ್ತಿಯಲ್ಲಿ ಮಾಡಬಹುದಾದ ಎಲ್ಲ ನೆರವನ್ನು ಕೂಡ ಸಂಪೂರ್ಣವಾಗಿ ನೀಡಲು ಸಿದ್ಧವಿದೆ. ಈ ವಿಷಯವನ್ನು ದಿನಾಂಕ:15-3-2018ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದ್ದು, ಈಗ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ವಿದ್ಯಾವಿಷಯಕ ಪರಿಷತ್‌ನ ನಿರ್ಣಯ:-*

1. *ವಿಶ್ವವಿದ್ಯಾನಿಲಯದಲ್ಲಿ ಪುಸ್ತಕೋದ್ಯಮಕ್ಕೆ ಸಂಬಂಧಿಸಿದಂತೆ ಡಿಪ್ಲೋಮಾ ಕೋರ್ಸ್ ಅಥವಾ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲು ಅನುಮೋದಿಸಲಾಯಿತು.*
2. *ಈ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ, ಪುಸ್ತಕಗಳು ಇನ್ನಿತರೆ ಯಾವುದೇ ವಿಷಯಕ್ಕೆ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮಂಡಲಿಯಲ್ಲಿ ಚರ್ಚಿಸಿ ನಿರ್ಣಯಿಸಬೇಕೆಂದು ಸೂಚಿಸಲಾಯಿತು.*

*ಸಿಂಡಿಕೇಟ್ ನಿರ್ಣಯ:- ವಿದ್ಯಾವಿಷಯಕ ಪರಿಷತ್‌ನ ಸಭೆಯ ನಿರ್ಣಯವನ್ನು ಒಪ್ಪಿಕೊಳ್ಳಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 04*

ವಿಷಯ: ಲಿಂಗಸೂಗೂರು ರಾಷ್ಟ್ರೀಯ ಮಹಿಳಾ ಮಹಾವಿದ್ಯಾಲಯದ ಸಂಯೋಜನೆಯನ್ನು ರದ್ದು ಪಡಿಸುವ ಕುರಿತು.

ಉಲ್ಲೇಖ: ಕಾಲೇಜಿನ ಪತ್ರ ದಿನಾಂಕ:08-01-2018

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪ್ರಾಂಶುಪಾಲರು, ರಾಷ್ಟ್ರೀಯ ಮಹಿಳಾ ಮಹಾವಿದ್ಯಾಲಯ ಲಿಂಗಸೂಗೂರು ಇವರು, ಪ್ರವೇಶಾತಿಯಿಲ್ಲದೆ ಸಂಸ್ಥೆಯು ಆರ್ಥಿಕ ನಷ್ಟದಲ್ಲಿ ನಡೆಸಲು ತುಂಬ ತೊಂದರೆಯಾಗುತ್ತಿದೆ. ಈ ವರ್ಷವೂ ಯಾವುದೇ ಹೊಸ ಪ್ರವೇಶ ಪಡೆದಿರುವುದಿಲ್ಲವೆಂದು ತಿಳಿಸಿ ಈ ವರ್ಷದಿಂದ ಕಾಲೇಜು ಮುಚ್ಚಲು ಅನುಮತಿ ನೀಡಬೇಕೆಂದು ವಿನಂತಿಸಿರುತ್ತಾರೆ. ಈ ವಿಷಯವನ್ನು ದಿನಾಂಕ:15-3-2018ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದ್ದು, ಈಗ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ವಿದ್ಯಾವಿಷಯಕ ಪರಿಷತ್‌ನ ನಿರ್ಣಯ:-***

**ಈ ವಿಷಯ ಕುರಿತು ಮಹಾವಿದ್ಯಾಲಯಕ್ಕೆ ಒಂದು ಪತ್ರ (Motivation/ಪ್ರೇರಣೆ) ಬರೆಯಲು ತೀರ್ಮಾನಿಸಲಾಯಿತು.**

***ಸಿಂಡಿಕೇಟ್ ನಿರ್ಣಯ:- ವಿದ್ಯಾವಿಷಯಕ ಪರಿಷತ್‌ನ ಸಭೆಯ ನಿರ್ಣಯವನ್ನು ಒಪ್ಪಿಕೊಳ್ಳಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 05*

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಡಾಕ್ಟೋರಲ್ ಸಮಿತಿಯ ಅವಧಿ ಮುಕ್ತಾಯವಾಗಿರುವುದರಿಂದ ದಿನಾಂಕ: 12-01-2018 ರಂದು ಸುತ್ತೋಲೆ ಕಳುಹಿಸಲಾಗಿದೆ. ಪಿಎಚ್.ಡಿ ಡಾಕ್ಟೋರಲ್ ಸಮಿತಿ ಪುನರ್ ರಚಿಸುವ ಕುರಿತು ಪಿಎಚ್.ಡಿ ಕ್ರಮನಿಯಮಾವಳಿಗಳ ಪ್ರಕಾರ ಡಾಕ್ಟೋರಲ್ ಸಮಿತಿಯನ್ನು ಮುಂದಿನ 3 ವರ್ಷದ ಅವಧಿಗಾಗಿ ಪುನರ್ ರಚಿಸಬೇಕಾಗಿದ್ದರಿಂದ ಸಂಬಂಧಿಸಿದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಂದ ಡಾಕ್ಟೋರಲ್ ಸಮಿತಿಯ ಬಾಹ್ಯ ಸದಸ್ಯರ ವಿವರವನ್ನು ಪಡೆದುಕೊಳ್ಳಲಾಗಿದೆ.

ವಿಭಾಗಗಳ ವಿವರ ಈ ಕೆಳಗಿನಂತಿದೆ.

1. ಕನ್ನಡ ಅಧ್ಯಯನ ವಿಭಾಗ
2. ಇಂಗ್ಲೀಷ ಅಧ್ಯಯನ ವಿಭಾಗ
3. ಸಮಾಜಶಾಸ್ತ್ರ ಅಧ್ಯಯನ ವಿಭಾಗ
4. ಅರ್ಥಶಾಸ್ತ್ರ ಅಧ್ಯಯನ ವಿಭಾಗ
5. ಮಹಿಳಾ ಅಧ್ಯಯನ ವಿಭಾಗ
6. ಸಮಾಜಕಾರ್ಯ ಅಧ್ಯಯನ ವಿಭಾಗ
7. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ
8. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ.
9. ಎಂ.ಬಿ.ಎ ಅಧ್ಯಯನ ವಿಭಾಗ
10. ಎಂ.ಕಾಂ ಅಧ್ಯಯನ ವಿಭಾಗ
11. ಇಲೆಕ್ಟ್ರಾನಿಕ್ಸ್ ಅಧ್ಯಯನ ವಿಭಾಗ
12. ಜೈವಿಕ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ
13. ಗಣಕ ವಿಜ್ಞಾನ ಅಧ್ಯಯನ ವಿಭಾಗ
14. ಔಷಧೀಯ ರಾಸಾಯನ ಶಾಸ್ತ್ರ ಅಧ್ಯಯನ ವಿಭಾಗ
15. ಶಿಕ್ಷಣ ಅಧ್ಯಯನ ವಿಭಾಗ
16. ದೈಹಿಕ ಶಿಕ್ಷಣ ಅಧ್ಯಯನ ವಿಭಾಗ

ಸಂಬಂಧಿಸಿದ ಎಲ್ಲಾ ಸಂಶೋಧನಾ ಅಧ್ಯಯನ ವಿಭಾಗದ ಮುಖ್ಯಸ್ಥರು ಬಾಹ್ಯ ಸದಸ್ಯರ ಪಟ್ಟಿಯನ್ನು ಸಲ್ಲಿಸಿದೆ. ಈ ಮೇಲಿನ ವಿಷಯಗಳನ್ನು ಸಿಂಡಿಕೇಟ್ ಅನುಮೋದನೆಗಾಗಿ ಈ ಕಡತವನ್ನು ತಯಾರಿಸಿ ತಮ್ಮ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಅನುಮೋದಿಸಲಾಯಿತು.***

## ಸಿಂಡಿಕೇಟ್ ಐಟಂ ಸಂಖ್ಯೆ : 06

**ವಿಷಯ:** ಪ್ರೊ.ಓಂಕಾರಗೌಡ ಕಾಕಡೆ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಅಮವಿವಿ ಇವರಿಗೆ ಕಾಂಬೋಡಿಯಾ ಮತ್ತು ಥೈಲಾಂಡ್ ದೇಶಗಳಿಗೆ ಭೇಟಿ ನೀಡಲು ಘಟನೋತ್ತರ ಅನುಮತಿಸುವ ಕುರಿತು.

**ಉಲ್ಲೇಖ:1.**ಪ್ರೊ.ಓಂಕಾರಗೌಡ ಕಾಕಡೆ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಇವರ ಮನವಿ ಪತ್ರ ದಿನಾಂಕ:27-12-2017
2. ಕಛೇರಿ ಆದೇಶ ಸಂಖ್ಯೆ:ಅಮವಿವಿ/ಆಡಳಿತ-1/2017-18 ದಿ:2-1-2017

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೊ.ಓಂಕಾರಗೌಡ ಕಾಕಡೆ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಇವರು ತಮ್ಮ ಪತ್ನಿಯವರಾದ ಸಕ್ಕೂಬಾಯಿ ಕಾಕಡೆ ಇವರ ಜೊತೆಗೆ ತಮ್ಮ ಸ್ವಂತ ಖರ್ಚಿನಿಂದ ದಿನಾಂಕ:5-01-2018 ರಿಂದ 18-01-2018ರ ವರೆಗೆ ಕಾಂಬೋಡಿಯಾ ಮತ್ತು ಥೈಲಾಂಡ್ ವಿದೇಶ ಪ್ರವಾಶ ಕೈಗೊಳ್ಳಲು ಉಲ್ಲೇಖ:02 ಕಛೇರಿ ಆದೇಶದನ್ವಯ ರಜೆ ಮಂಜೂರಿಸಿ ಅನುಮತಿ ನೀಡಲಾಗಿದೆ. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:- ಘಟನೋತ್ತರ ಅನುಮೋದನೆ ನೀಡಲಾಯಿತು.*

## ಸಿಂಡಿಕೇಟ್ ಐಟಂ ಸಂಖ್ಯೆ : 07

**ವಿಷಯ:** ಡಾ.ಸಂಜೀವಕುಮಾರ ಗಿರಿ, ಸಹಾಯಕ ಪ್ರಾಧ್ಯಾಪಕರು, ಔಷಧೀಯ ರಾಸಾಯನ ಶಾಸ್ತ್ರ ಅಧ್ಯಯನ ವಿಭಾಗ ಇವರಿಗೆ ನಿರಪೇಕ್ಷಣಾ ಪತ್ರ (NOC) ನೀಡುವ ಕುರಿತು.

**ಉಲ್ಲೇಖ: 1.**ಡಾ.ಸಂಜೀವಕುಮಾರ ಗಿರಿ, ಸಹಾಯಕ ಪ್ರಾಧ್ಯಾಪಕರು, ಔಷಧೀಯ ರಾಸಾಯನ ಶಾಸ್ತ್ರ ಅಧ್ಯಯನ ವಿಭಾಗ ಇವರ ಮನವಿ ಪತ್ರ ದಿನಾಂಕ:23-10-2017
2. ನಿರಪೇಕ್ಷಣಾ ಪತ್ರ ನೀಡಿದ ದಿನಾಂಕ:23-10-2017

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಡಾ.ಸಂಜೀವಕುಮಾರ ಗಿರಿ, ಸಹಾಯಕ ಪ್ರಾಧ್ಯಾಪಕರು, ಔಷಧೀಯ ರಸಾಯನ ಶಾಸ್ತ್ರ ಅಧ್ಯಯನ ವಿಭಾಗ ಇವರಿಗೆ ಕರ್ನಾಟಕ ಸೆಂಟ್ರಲ್ ವಿಶ್ವವಿದ್ಯಾನಿಲಯ ಕಲಬುರಗಿ ಇವರು ಆಹ್ವಾನಿಸಿರುವ ರಸಾಯನ ಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಹಾಕಲು ಉಲ್ಲೇಖ:2ರನ್ವಯ ದಿನಾಂಕ:23-10-2017ರಂದು ನಿರಪೇಕ್ಷಣಾ ಪತ್ರ (NOC) ನೀಡಲಾಗಿದೆ. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:- ಘಟನೋತ್ತರ ಅನುಮೋದನೆ ನೀಡಲಾಯಿತು.*

## ಸಿಂಡಿಕೇಟ್ ಐಟಂ ಸಂಖ್ಯೆ : 08

**ವಿಷಯ:-** 371(ಜೆ) ಅಡಿಯಲ್ಲಿ ವೃಂದವಾರು 12 ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ 371(ಜೆ) ಅಡಿಯಲ್ಲಿ ವೃಂದವಾರು 12 ಬೋಧಕೇತರ ಹುದ್ದೆಗಳನ್ನು ಹಂಚಿಕೆ ಮಾಡಿದ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.(ಪಟ್ಟಿ ಲಗತ್ತಿಸಿದೆ)

*ನಿರ್ಣಯ:-* **371(ಜೆ) ಅಡಿಯಲ್ಲಿ ವೃಂದವಾರು 12 ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು** *ಅನುಮೋದಿಸಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 09*

**ವಿಷಯ:–** B.Sc/M.Sc ನರ್ಸಿಂಗ ಕೋರ್ಸ್‌ಗೆ ಮಂಜೂರಾಗಿರುವ 30 ಹುದ್ದೆಗಳಾದ ಪ್ರಾಂಶುಪಾಲರು, ಪ್ರಾಧ್ಯಾಪಕರು, ರೀಡರ್, ಉಪನ್ಯಾಸಕರು ಮತ್ತು ಟ್ಯೂಟರ್ ಪ್ರಸ್ತುತ ಇರುವ ಪದನಾಮ ಮಾರ್ಪಡಿಸಿ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ವರ್ಗಾಯಿಸುವ ಕುರಿತು ಸರಕಾರದ ಅನುಮತಿ ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಹುದ್ದೆಗಳ ವಿವರ ಈ ಕೆಳಗಿನಂತಿದೆ .

| ಕ್ರ.ಸಂ | ಮಂಜೂರಾಗಿರುವ ಹುದ್ದೆ | ಪರಿನಿಯಮಾವಳಿಯಲ್ಲಿ ಪ್ರಸ್ತುತ ಇರುವ ಪದನಾಮ | ಮಾರ್ಪಡಿಸಬೇಕಾದ ಪದನಾಮ |
|---|---|---|---|
| 1. | 01 | ಪ್ರಾಂಶುಪಾಲರು | ಪ್ರಾಧ್ಯಾಪಕರು |
| 2. | 01 | ಪ್ರಾಧ್ಯಾಪಕರು | ಪ್ರಾಧ್ಯಾಪಕರು |
| 3. | 5+2 | ರೀಡರ್ | ಸಹ–ಪ್ರಾಧ್ಯಾಪಕರು |
| 4. | 5+2 | ಉಪನ್ಯಾಸಕರು | ಸಹಾಯಕ–ಪ್ರಾಧ್ಯಾಪಕರು |
| 5. | 14 | ಟ್ಯೂಟರ್ | ಸಹಾಯಕ–ಪ್ರಾಧ್ಯಾಪಕರು |

*ನಿರ್ಣಯ:– ಮುಂದೂಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 10*

**ವಿಷಯ:–** ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ಒಬ್ಬ ಟೆಕ್ನಿಯಶಿಯನ್ ತೆಗೆದುಕೊಂಡ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:– ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 11*

**ವಿಷಯ:–** ಮಾನ್ಯ ಕುಲಪತಿಗಳ ಆಪ್ತ ಶಾಖೆಯಲ್ಲಿ ಒಬ್ಬ ಶೀಘ್ರಲಿಪಿಗಾರರನ್ನು ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–* **ಮಾನ್ಯ ಕುಲಪತಿಗಳ ಆಪ್ತ ಶಾಖೆಯಲ್ಲಿ ಒಬ್ಬ ಶೀಘ್ರಲಿಪಿಗಾರರನ್ನು ತೆಗೆದುಕೊಳ್ಳಲು** *ಅನುಮೋದಿಸಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 12*

**ವಿಷಯ:** 12–02–2018 ರಂದು ಜರುಗಿದ ಸ್ನಾತಕ ವಿಶೇಷ ಅಧ್ಯಯನ ಮಂಡಳಿ ಸಭೆಯಲ್ಲಿ ಶಿಫಾರಸುಗೊಂಡ ನಡಾವಳಿಗಳ ಅನುಮೋದನೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 12–02–2018 ರಂದು ಜರುಗಿದ ಸ್ನಾತಕ ಕನ್ನಡ ಮತ್ತು ಇಂಗ್ಲೀಷ ವಿಷಯಗಳ ವಿಶೇಷ ಅಧ್ಯಯನ ಮಂಡಳಿಗಳಲ್ಲಿ ಶಿಫಾರಸುಗೊಂಡ ನಡಾವಳಿಗಳನ್ನು ಈ ವಿಷಯವನ್ನು ದಿನಾಂಕ:15–3–2018ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದ್ದು, ಈಗ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ವಿದ್ಯಾವಿಷಯಕ ಪರಿಷತ್‌ನ ನಿರ್ಣಯ:–*** **ಸ್ನಾತಕ ವಿಶೇಷ ಅಧ್ಯಯನ ಮಂಡಳಿ ಸಭೆಯ ನಡವಳಿಯಲ್ಲಿನ ಆರ್ಥಿಕ ವೆಚ್ಚವನ್ನು ಹೊರತುಪಡಿಸಿ ಅನುಮೋದಿಸಲಾಯಿತು.**

***ಸಿಂಡಿಕೇಟ್ ನಿರ್ಣಯ:– ವಿದ್ಯಾವಿಷಯಕ ಪರಿಷತ್‌ನ ಸಭೆಯ ನಿರ್ಣಯವನ್ನು ಒಪ್ಪಿಕೊಳ್ಳಲಾಯಿತು.***

# *ಸಿಂಡಿಕೇಟ್ ಐಟಂ ಸಂಖ್ಯೆ : 13*

**ವಿಷಯ:** 2018–19 ನೇ ಶೈಕ್ಷಣಿಕ ಸಾಲಿಗಾಗಿ ಹೊಸ ಮಹಿಳಾ ಕಾಲೇಜು, ಹೊಸ ಕೋರ್ಸು, ಹೊಸ ವಿಷಯ, ಶಾಶ್ವತ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆ ಸಂಲಗ್ನತೆ ಮಂಜೂರಾತಿಗಾಗಿ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2018–19 ನೇ ಶೈಕ್ಷಣಿಕ ಸಾಲಿಗೆ ಹೊಸ ಮಹಿಳಾ ಕಾಲೇಜು, ಹೊಸ ಕೋರ್ಸು, ಹೊಸ ವಿಷಯ, ಶಾಶ್ವತ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆ ಸಂಲಗ್ನತೆ ಮಂಜೂರಾತಿಗಾಗಿ 10 ಸ್ಥಾನಿಕ ವಿಚಾರಣಾ ಸಮಿತಿಗಳನ್ನು ರಚಿಸಲಾಗಿತ್ತು. ಸದರಿ ಸ್ಥಾನಿಕ ವಿಚಾರಣಾ ಸಮಿತಿಗಳು ಕಾಲೇಜು ತಪಾಸಣೆ ಮಾಡಿ ವರದಿಗಳನ್ನು ಸಲ್ಲಿಸಿರುತ್ತಾರೆ. ಸದರಿ ವರದಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59 ರ ಪ್ರಕಾರ ಈ ವಿಷಯವನ್ನು ದಿನಾಂಕ:15–3–2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದ್ದು, ಈಗ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ವಿದ್ಯಾವಿಷಯಕ ಪರಿಷತ್‌ನ ನಿರ್ಣಯ:–***

1. **ಸ್ಥಾನಿಕ ವಿಚಾರಣಾ ಸಮಿತಿಗಳ ವರದಿಯನ್ನು ಒಪ್ಪಿಕೊಳ್ಳಲಾಯಿತು.**
2. **ಹುಣಸಗಿ ಮಹಾವಿದ್ಯಾನಿಲಯದ ಸಂಯೋಜನೆಯನ್ನು ತಿರಸ್ಕರಿಸಲಾಯಿತು ಹಾಗೂ ಮುಂದಿನ ಶೈಕ್ಷಣಿಕ ಸಾಲಿಗೆ** Improvement **ಮಾಡಿಕೊಳ್ಳಲು ಸೂಚಿಸಿ ಪತ್ರ ಬರೆಯಬೇಕೆಂದು ತಿಳಿಸಲಾಯಿತು.**
3. **ಜೇವರ್ಗಿ ಹಾಗೂ ಕಮಲಾಪುರ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು ತಿಳಿಸಿ ಪತ್ರ ಬರೆಯಲು ತೀರ್ಮಾನಿಸಲಾಯಿತು.**
4. **LIC Formatನಲ್ಲಿ ಕೆಲವೊಂದು Modification ಮಾಡಲು ಸ್ಥಾನಿಕ ವಿಚಾರಣಾ ಸಮಿತಿ ಅಧ್ಯಕ್ಷರು ತಿಳಿಸಿದ್ದನ್ನು ಒಪ್ಪಿಕೊಳ್ಳಲಾಯಿತು.**

***ಸಿಂಡಿಕೇಟ್ ನಿರ್ಣಯ:– ವಿದ್ಯಾವಿಷಯಕ ಪರಿಷತ್‌ನ ಸಭೆಯ ನಿರ್ಣಯವನ್ನು ಒಪ್ಪಿಕೊಳ್ಳಲಾಯಿತು.***

# *ಸಿಂಡಿಕೇಟ್ ಪುರವಣಿ ಸಂಖ್ಯೆ : 01*

**ವಿಷಯ:** M/s Keradi Construction ಇವರು ತಮ್ಮ ಕಂಪನಿ ಆರ್ಥಿಕ ಸಂಕಷ್ಟದಲ್ಲಿ ಇರುವ ಕಾರಣ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಸ್ನಾತಕೋತ್ತರ ವಸತಿನಿಲಯದ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸುತ್ತೇವೆ ಎಂದು ದಿನಾಂಕ:20–02–2018ರಂದು ಪತ್ರ ಸಲ್ಲಿಸಿರುತ್ತಾರೆ. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಮುಂದಿನ ಸೂಕ್ತ ನಿರ್ದೇಶನಕ್ಕಾಗಿ ಮಂಡಿಸಿದೆ.

*ನಿರ್ಣಯ:–*

1. ***ಈ ವಿಷಯ ಕುರಿತು ಕಾನೂನು ಸಲಹೆಗಾರರ ಸಲಹೆ ಪಡೆದು ಮುಂದಿನ ಕ್ರಮ ಜರುಗಿಸಲು ತೀರ್ಮಾನಿಸಲಾಯಿತು.***

2. *Third Party Inspection ಮಾಡಿಸಬೇಕೆಂದು ಸಭೆಯು ಸೂಚಿಸಿತು.*
3. ***ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಸ್ನಾತಕೋತ್ತರ ವಸತಿನಿಲಯದ ಕಟ್ಟಡ ಕಾಮಗಾರಿಗಳ ಅಂದಾಜು ವೆಚ್ಚಗಳನ್ನು ತಾಂತ್ರಿಕ ವಿಭಾಗದಿಂದ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

ವಿಷಯ:- ವಿಶ್ವವಿದ್ಯಾಲಯದ ವಿವಿಧ ಉಪ-ಸಮಿತಿಗಳನ್ನು ರಚಿಸುವ ಕುರಿತು

ಉಲ್ಲೇಖ:- 1.ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 37ರ ಪ್ರಕಾರ
2.ಸರಕಾರದ ಪತ್ರ ಸಂಖ್ಯೆ:ಇಡಿ19ಎಂವಿಎಸ್2009 ದಿನಾಂಕ:1-4-2011
3.KSWUB/Const.BC/2014-15/772 date:16-6-2017

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಗಾಗಿ ವಿವಿಧ ಉಪ-ಸಮಿತಿಗಳನ್ನು ಮಾನ್ಯ ಕುಲಪತಿಗಳ ನಿರ್ದೇಶನದ ಪ್ರಕಾರ (ಉಲ್ಲೇಖ:1,2,3) ಅಧಿಸೂಚನೆಯಂತೆ ರಚನೆ ಮಾಡಲಾಗಿತ್ತು. ಸದರಿ ಸಮಿತಿಗಳಲ್ಲಿ ಇರುವ ಸಿಂಡಿಕೇಟ್/ವಿದ್ಯಾವಿಷಯ ಪರಿಷತ್‌ನ (ಸರಕಾರದಿಂದ ನಾಮನಿರ್ದೇಶಿತರಾದ) ಸದಸ್ಯರ ಅವಧಿಯು ದಿನಾಂಕ:18-2-2018 ರಂದು ಮುಗಿದಿರುತ್ತದೆ. ಆದಕಾರಣ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-* **ವಿಶ್ವವಿದ್ಯಾನಿಲಯದ ವಿವಿಧ ಉಪ-ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

ವಿಷಯ:- ಜನೆವರಿ/ಫೆಬ್ರುವರಿ-2016 ಹಾಗೂ ನವೆಂಬರ/ಡಿಸೆಂಬರ್- 2016 ಪರೀಕ್ಷೆಯಲ್ಲಿ ನಕಲು ಮಾಡಿದ ವಿದ್ಯಾರ್ಥಿನಿಯರಿಗೆ ಕೈಗೊಂಡ ಕ್ರಮದ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಕಲು ಮಾಡಿದ ವಿದ್ಯಾರ್ಥಿನಿಯರ ದಾಖಲೆಗಳನ್ನು ಪರಿಶೀಲಿಸಲಾಗಿ ನಕಲು ಮಾಡಿದ ಕ್ರಮದ ಬಗ್ಗೆ ದಿನಾಂಕ:15-3-2018ರಂದು ಜರುಗಿದ ನಕಲು ಪ್ರಕರಣ ಪರಿಶೀಲನಾ ಸಮಿತಿಯ ಸಭೆಯ ಎದುರು ಸದರಿ ವಿದ್ಯಾರ್ಥಿನಿಯರೊಂದಿಗೆ ಚರ್ಚೆ ನಡೆಸಿ ನಕಲು ಮಾಡಿರುವುದು ಖಚಿತವೆಂದು ಸಮಿತಿಯ ಹಾಗೂ ಸಭೆಗೆ ಗೈರುಹಾಜರಾದ ವಿದ್ಯಾರ್ಥಿನಿಯರ ನಕಲು ಪತ್ರಿಕೆಗಳನ್ನು ಪರಿಶೀಲಿಸಿ ಸದರಿ ಸಭೆಯ ನಿರ್ಣಯದಂತೆ ವಿದ್ಯಾರ್ಥಿನಿಯರಿಗೆ ನಕಲು ಪ್ರಕರಣದ ಸಭೆಯ ನಡವಳಿಯ ಪ್ರಕಾರ ಮುಂಬರುವ ನವೆಂಬರ/ಡಿಸೆಂಬರ್- 2017ರಲ್ಲಿ ನಡೆಯಬೇಕಾದ ಪರೀಕ್ಷೆಯಲ್ಲಿ ಎಲ್ಲ ವಿಷಯಗಳ ಪತ್ರಿಕೆಗಳನ್ನು ಮರಳಿ ಬರೆಯಲು ಹಾಗೂ ಪ್ರಸ್ತುತ ಪರೀಕ್ಷೆ ಅನುಮತಿಯನ್ನು ನೀಡುವ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮತ್ತು ಮುಂದಿನ ನಿರ್ದೇಶನಕ್ಕಾಗಿ ಮಂಡಿಸಿದೆ.

*ನಿರ್ಣಯ:-*

1. *ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಲಾಯಿತು.*
2. *ಪರೀಕ್ಷೆ ಬರೆದ ವಿದ್ಯಾರ್ಥಿನಿಯರ ಫಲಿತಾಂಶವನ್ನು ಬಿಡುಗಡೆ ಮಾಡಬೇಕೆಂದು ಸೂಚಿಸಲಾಯಿತು.*
3. *ಸದರಿ ವಿದ್ಯಾರ್ಥಿನಿಯರ ಕುರಿತು ನಡವಳಿ ಮುಟ್ಟಿದ ಏಳು ದಿನದೊಳಗೆ ಸಂಬಂಧಪಟ್ಟವರಿಂದ ವಿವರಣೆ ಪಡೆದುಕೊಳ್ಳಬೇಕು. ವಿವರಣೆ ನೀಡದಿದ್ದಲ್ಲಿ ಕುಲಸಚಿವರ(ಮೌ)ನ್ನೊಳಗೊಂಡ 3 ರಿಂದ 5 ಜನರ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.*

## *ಸಿಂಡಿಕೇಟ್ ಪುರವಣಿ ಸಂಖ್ಯೆ : 04*

ವಿಷಯ:– ಡಿಸೆಂಬರ್–2017ರ ಪರೀಕ್ಷೆಯಲ್ಲಿ ನಕಲು ಮಾಡಿದ ವಿದ್ಯಾರ್ಥಿನಿಯರಿಗೆ ಕೈಗೊಂಡ ಕ್ರಮದ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಕಲು ಮಾಡಿ ವಿದ್ಯಾರ್ಥಿನಿಯರ ದಾಖಲೆಗಳನ್ನು ಪರಿಶೀಲಿಸಲಾಗಿ ನಕಲು ಮಾಡಿರುವ ಕ್ರಮದ ಬಗ್ಗೆ ದಿನಾಂಕ:13–3–2018ರಂದು ಜರುಗಿದ ನಕಲು ಪ್ರಕರಣ ಪರಿಶೀಲನಾ ಸಮಿತಿಯ ಸಭೆಯ ಎದುರು ಸದರಿ ವಿದ್ಯಾರ್ಥಿನಿಯರೊಂದಿಗೆ ಚರ್ಚೆ ನಡೆಸಿ ನಕಲು ಮಾಡಿರುವುದು ಖಚಿತವೆಂದು ಸಮಿತಿಯು ಹಾಗೂ ಸಭೆಗೆ ಗೈರಹಾಜರಾದ ವಿದ್ಯಾರ್ಥಿನಿಯರ ನಕಲು ಪತ್ರಿಕೆಗಳನನು ಪರಿಶೀಲಿಸಿ ಸದರಿ ಸಭೆಯ ನಿರ್ಣದಂತೆ MPC Act R-2/04 ಅನ್ವಯ ವಿದ್ಯಾರ್ಥಿನಿಯರಿಗೆ ಮುಂಬರುವ ಮೇ/ಜೂನ್–2018ರಲ್ಲಿ ನಡೆಯಬೇಕಾದ ಪರೀಕ್ಷೆಗೆ ಅನುಮತಿಯನ್ನು ನೀಡಬಾರದೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ನಕಲು ಪ್ರಕರಣ ಸಭೆಯ ನಡವಳಿಯ ಪ್ರಕಾರ ಸಭೆಯು ಅನುಮೋದನೆಯನ್ನು ನೀಡಿ ಸದರಿ ನಿರ್ಣಯದಂತೆ ನವೆಂಬರ್/ಡಿಸೆಂಬರ್–2018ರಲ್ಲಿ ಜರುಗುವ ಪರೀಕ್ಷೆಗೆ ಸದರಿ ವಿದ್ಯಾರ್ಥಿನಿಯರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸಲಾಯಿತು. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–* ವಿದ್ಯಾರ್ಥಿನಿಯರಿಗೆ ನವೆಂಬರ್/ಡಿಸೆಂಬರ್–2018ರಲ್ಲಿ ಜರುಗುವ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನೀಡಿರುವುದನ್ನು ಒಪ್ಪಿಕೊಳ್ಳಲಾಯಿತು.**

***ಇತರೆ ವಿಷಯಗಳು***

ಮಾನ್ಯ ಕುಲಪತಿಗಳು ಸ್ಪರ್ಶ(SPARSH)ಸಮಿತಿ ಸಲ್ಲಿಸಿರುವ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

**ನಿರ್ಣಯ:–ಈ ವಿಷಯ ಕುರಿತು ಚರ್ಚಿಸಿ, ಸಂಬಂಧಪಟ್ಟ ವಿದ್ಯಾರ್ಥಿನಿಯ ವಿನಂತಿಯ ಮೇರೆಗೆ ಅವಳ ಸಂಶೋಧನ ಮಾರ್ಗದರ್ಶಕರನ್ನು ಬದಲಾಯಿಸಲು ಅನುಮೋದಿಸಲಾಯಿತು. ಹಾಗೂ ಇನ್ನಿತರೆ ವಿಷಯಗಳ ಕುರಿತು ಮುಂದಿನ ಸಭೆಯಲ್ಲಿ ಚರ್ಚಿಸಲು ಸೂಚಿಸಲಾಯಿತು.**

**ಕುಲಸಚಿವರು ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ